2018 ಕ.ತೀ.ವ 361

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಕರಣ್ –ವಿರುದ್ಧ– ಕರ್ನಾಟಕ ರಾಜ್ಯ (ರಟ್ಕಲ್ ಪೊಲೀಸ್ ಸ್ಟೇಷನ್, ಕಲಬುರ್ಗಿ)*

ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015ರ 102ನೇ ಪ್ರಕರಣದಡಿಯಲ್ಲಿನ ಕ್ರಿಮಿನಲ್ ಪುನರೀಕ್ಷಣಾ ಅರ್ಜಿ.

ಬಾಲಾಪರಾಧ ನ್ಯಾಯ ಮಂಡಳಿ ಮತ್ತು ಸತ್ರ ನ್ಯಾಯಾಲಯದ ಆದೇಶವನ್ನು ಬದಿಗಿರಿಸಿ ತಮ್ಮ ಮಗನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸುವಂತೆ ಕೋರಿ ಸದರಿ ಪುನರೀಕ್ಷಣಾ ಅರ್ಜಿ.

ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015ರ 102ನೇ ಪ್ರಕರಣದ ಜಾಮೀನನ್ನು ನಿರಾಕರಿಸಲು ಕೆಳ ನ್ಯಾಯಾಲಯಗಳು ಯಾವುದೇ ಸೂಕ್ತವಾದ ಆಧಾರವಿರುವುದಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಪುನರೀಕ್ಷಣಾ ಅರ್ಜಿಯನ್ನು ಪುರಸ್ಕರಿಸಿದೆ.

ಅರ್ಜಿದಾರರ ಪರ: ಶ್ರೀ ಅವಿನಾಶ್ ಉಪ್‌ಲೋಂಕರ್ – ವಕೀಲರ ಪರವಾಗಿ ಶ್ರೀ ರವಿ ಕೆ. ಅನೂರ್ – ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ಮಕ್ಬೂಬೂಲ್ ಅಹಮದ್, ಹೆಚ್‌ಸಿಜಿಪಿ.

*ಕ್ರಿಮಿನಲ್ ಪುನರ್ ಪರಿಷ್ಕರಣಾ ಅರ್ಜಿ ಸಂ. 200018/2017, ದಿನಾಂಕ: 22ನೇ ಫೆಬ್ರವರಿ, 2017.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:**

ಈ ಅರ್ಜಿಯನ್ನು ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015 (ಸಂಕ್ಷಿಪ್ತವಾಗಿ ಅಧಿನಿಯಮ)ರ 102ನೇ ಪ್ರಕರಣದ ಅಡಿಯಲ್ಲಿ ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನ ತಂದೆ ಸಲ್ಲಿಸಿದ್ದು, ಅಪರಾಧ ಸಂ.146/ 2016ರಲ್ಲಿ ಕಲಬುರ್ಗಿಯ ಬಾಲಕ ನ್ಯಾಯಮಂಡಳಿ, ದಿನಾಂಕ 05.01.2017 ರಂದು ಹೊರಡಿಸಿದ ಆದೇಶವನ್ನು ವಜಾ ಮಾಡುವುದಕ್ಕೆ ಮತ್ತು ಕ್ರಿಮಿನಲ್ ಅಪೀಲು ಸಂಖ್ಯೆ 2/2017 ರಲ್ಲಿ ಕಲುಬುರ್ಗಿಯ IIನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು ದಿನಾಂಕ 17.01.2017 ರಂದು ಹೊರಡಿಸಿದ ಆದೇಶವನ್ನು ಸಹ ವಜಾ ಮಾಡುವುದಕ್ಕೆ ಪ್ರಾರ್ಥಿಸಿ ಈ ಅರ್ಜಿಯನ್ನು ದಾಖಲಿಸಿರುತ್ತಾರೆ.

2. ದೂರನ್ನು ದಾಖಲಿಸಲು ಕಾರಣವಾದ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ, ದಿನಾಂಕ 22.12.2016 ರಂದು ಸುಮಾರು ರಾತ್ರಿ 9.30 ಗಂಟೆಯಲ್ಲಿ ಸಂತ್ರಸ್ತ ಬಾಲಕಿಯ ತಂದೆ ದೂರನ್ನು ದಾಖಲಿಸಿರುವವರು, ದೂರಿನಲ್ಲಿ ಸಂತ್ರಸ್ತ ಬಾಲಕಿಯ ತಂದೆ ಹೇಳಿರುವ ಅಂಶಗಳೆಂದರೆ ರುಮ್ಮನಗುಡ ತಾಂಡದಲ್ಲಿ ನಡೆದ ಮದುವೆ ಸಮಾರಂಭಕ್ಕೆ ನನ್ನ ಹೆಂಡತಿ ಹಾಗೂ ಮಗಳು ಹೋಗಿದ್ದರು. ಮಧ್ಯರಾತ್ರಿ ಗೋವರ್ಧನ ಎಂಬ ವ್ಯಕ್ತಿಯು ತನ್ನ ತಂದೆ ವರ್ಮ್‌ಸಿಂಗ್‌ಯೊಂದಿಗೆ ನಡೆದು ಹೋಗುತ್ತಿರುವ ದಾರಿಯಲ್ಲಿ ಒಂದು ಹೆಣ್ಣಿನ ಅರಚಾಟದ ಧ್ವನಿಯು ಕೇಳಿ ಧ್ವನಿ ಬಂದ ಕಡೆ ಧಾವಿಸಿದಾಗ ಅಲ್ಲಿ ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನು ಸಂತ್ರಸ್ತ ಬಾಲಕಿಯ ಮೇಲೆ ಬಲಾತ್ಕಾರವಾಗಿ ಲೈಂಗಿಕ ಅತ್ಯಾಚಾರವನ್ನು ಎಸಗುತ್ತಿರುವುದು ಕಂಡು ಬಂದು, ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನ ಕೃತ್ಯವನ್ನು ತಡೆದಾಗ ಆ ಬಾಲಕನು ಕೃತ್ಯ ತಡೆದ ವ್ಯಕ್ತಿಗೆ ಜೀವ ಬೆದರಿಕೆ ಹಾಕಿರುವ ವಿಷಯವನ್ನು ಸಂತ್ರಸ್ತ ಬಾಲಕಿಯ ತಂದೆಯ ಹತ್ತಿರ ಎಲ್ಲಾ ಮಾಹಿತಿ ತಿಳಿಸಿದಾಗ, ಆ ಕೂಡಲೇ ಗೋವರ್ಧನನೊಂದಿಗೆ ನಾನು ಸಹ ಘಟನೆ ನಡೆದ

ಸ್ಥಳಕ್ಕೆ ಹೋದಾಗ ಸಂತ್ರಸ್ತ ಬಾಲಕಿ ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ನನ್ನನ್ನು ರೂಮಿನೊಳಗೆ ಎಳೆದೊಯ್ದು ನನ್ನ ಮೇಲೆ ಬಲಾತ್ಕಾರವಾಗಿ ಅತ್ಯಾಚಾರ ಎಸಗಿರುತ್ತಾನೆ ಎಂದು ತಿಳಿಸಿರುತ್ತಾಳೆ. ಬಾಧಿತ ಬಾಲಕಿಯಯನ್ನು ಮನೆಗೆ ಕರೆ ತಂದು ದೂರಿನೊಂದಿಗೆ ನನ್ನ ಕುಟುಂಬದೊಂದಿಗೆ ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನ ಮನೆಗೆ ಹೋಗಿ ನಡೆದ ವಿಷಯವನ್ನು ಬಾಲಕನ ಪೋಷಕರ ಗಮನಕ್ಕೆ ತಂದರೂ ಅವರುಗಳು ಇವರ ಆಪಾದನೆಯನ್ನೆಲ್ಲಾ ನಿರಾಕರಿಸಿ ತುಂಬಾ ದರ್ಪದಿಂದ ನಡೆದುಕೊಂಡು ಅವರೆಲ್ಲ ನನಗೆ ಜೀವ ಬೆದರಿಕೆ ಹಾಕಿದರೂ ಎಂದು ಸಂತ್ರಸ್ತ ಬಾಲಕಿಯ ತಂದೆ ಆಪಾದಿಸಿರುವರು. ಮನೆಗೆ ಮರಳಿದಾಗ ಬಾಧಿತ ಬಾಲಕಿಯು ತುಂಬಾ ಕ್ಷೋಭೆಗೆ ಒಳಗಾಗಿರುವುದನ್ನು ಕಂಡು ಅವಳನ್ನು ಮತ್ತಷ್ಟು ವಿಚಾರಣೆಗೆ ಒಳಪಡಿಸಿದಾಗ ಅವಳು ತನ್ನ ಮೇಲೆ ಬಲಾತ್ಕಾರವಾಗಿ ಅತ್ಯಾಚಾರವಾಗಿರುವುದರಿಂದ ಸಮಾಜದಲ್ಲಿ ನಾನು ನನ್ನ ಘನತೆಯನ್ನು ಕಳೆದುಕೊಂಡಿದ್ದೇನೆ ಎಂದು ಮನನೊಂದು ವಿಷ ಸೇವಿಸಿರುವೆ ಎಂಬ ಮಾಹಿತಿಯನ್ನು ಬಹಿರಂಗ ಪಡಿಸಿರುತ್ತಾಳೆ. ಆ ಕೂಡಲೇ ಅವಳನ್ನು ಆಸ್ಪತ್ರೆಗೆ ಸಾಗಿಸಲಾಯಿತ್ತಾದರೂ ಅವಳು ಆಸ್ಪತ್ರೆಯಲ್ಲಿ ಸಾವನ್ನಪ್ಪಿದಳು. ಮೇಲಿನ ದೂರಿನ ಆಧಾರದ ಮೇಲೆ ಕಾನೂನು ಸಂಘರ್ಷಕ್ಕೊಳಗಾದ ಬಾಲಕನ ವಿರುದ್ಧ ದೂರನ್ನು ದಾಖಲಿಸಲಾಯಿತು. ಇದರಿಂದ ಬಾಲಕನು ಈಗ ಬಾಲಕ ನ್ಯಾಯ ಮಂಡಳಿಯ ಅಭಿರಕ್ಷೆಯಲ್ಲಿ ಇರುತ್ತಾನೆ. ದೂರನ್ನು ವಜಾಗೊಳಿಸುವಂತೆ ಬಾಲಕ ನ್ಯಾಯ ಮಂಡಳಿ, ಕಲುಬುರ್ಗಿ ಇದರ ಮುಂದೆ ಅರ್ಜಿ ಸಲ್ಲಿಸಲಾಯಿತು. ಅರ್ಜಿಯನ್ನು ನ್ಯಾಯ ಮಂಡಳಿಯು ವಜಾಗೊಳಿಸಿತು. ನಂತರದಲ್ಲಿ, ಅಪರಾಧ ಅಪೀಲು ಸಂ.2/2017 ರಲ್ಲಿ ಅಪೀಲನ್ನು ಸಲ್ಲಿಸಲಾಯಿತು. ಅಪೀಲು ಅರ್ಜಿಯನ್ನು ವಜಾಗೊಳಿಸಲಾಯಿತು. ಅಂಥಾ ವಜಾ ಆದೇಶಗಳಿಂದ ಬಾಧಿತನಾದ ಬಾಲಕ ತಂದೆಯು ಈ ನ್ಯಾಯಾಲಯ ಮುಂದೆ ಈ ಅರ್ಜಿಯನ್ನು ಸಲ್ಲಿಸಿರುವರು.

3. ನಾನು, ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ವಾದವನ್ನು ಮತ್ತು ಪ್ರತ್ಯರ್ಜಿದಾರ–ರಾಜ್ಯ ಸರ್ಕಾರದ ಪರವಾಗಿ ಹಾಜರಾದ ಉಚ್ಚ ನ್ಯಾಯಾಲಯದ ಮಾನ್ಯ ಸರ್ಕಾರಿ ನ್ಯಾಯವಾದಿಯವರ ವಾದವನ್ನು ಆಲಿಸಿರುತ್ತೇನೆ.

4. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದದಲ್ಲಿ ಅರ್ಜಿದಾರ ತುಂಬಾ ಮುಗ್ಧನಾಗಿರುವನೆಂದು ಮತ್ತು ಅರ್ಜಿದಾರ ಇನ್ನು ಬಾಲಕನಾಗಿರುವನು. ಅವನ ವಿರುದ್ಧ ಮಾಡಿದ ಯಾವುದೇ ಅಪರಾಧವನ್ನು ಅವನು ಎಸಗಿರುವುದಿಲ್ಲವೆಂದು ಒತ್ತಿ ಹೇಳಿರುವರು. ಅಧಿನಿಯಮದ 12ನೇ ಪ್ರಕರಣದ ಅಡಿಯಲ್ಲಿ ಬಾಲಕನು ಜಾಮೀನಿನ ಮೇಲೆ ಬಿಡುಗಡೆಗೊಳ್ಳಲು ಹಕ್ಕುಳ್ಳವನಾಗಿರುವನು ಎಂದು ವಾದವನ್ನು ಮಂಡಿಸಿರುವರು. ಮುಂದುವರೆದು, ಸದರಿ ಪ್ರಕರಣದಲ್ಲಿ ಪರಿಗಣಿಸಬೇಕಾದ ಆ ಯಾವುದೇ ಕಾರಣಗಳು ಇದ್ದಾಗ್ಯೂ ಅದನ್ನು ಯುಕ್ತವಾಗಿ ಪರಿಗಣಿಸಿರುವುದಿಲ್ಲ ಮತ್ತು ಜಾಮೀನು ಅರ್ಜಿಯನ್ನು ತಪ್ಪಾಗಿ ಗ್ರಹಿಸಿ ವಜಾಮಾಡಲಾಗಿರುತ್ತದೆ ಎಂದು ತಮ್ಮ ವಾದವನ್ನು ಮತ್ತಷ್ಟು ಮುಂದುವರೆಸಿ, ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನ ಪೋಷಕರು/ತಂದೆ–ತಾಯಿಯರು ಬಾಲಕನ ಸಂರಕ್ಷಣೆಯನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಬಾಲಕನನ್ನು ಉತ್ತಮ ವಾತಾವರಣದಲ್ಲಿ ಬೆಳೆಸುವುದಕ್ಕೆ ಮತ್ತು ಬಾಲಕನ ಒಳ್ಳೆಯ ನಡತೆಗಾಗಿ ಅವನನ್ನು ಪರಿವೀಕ್ಷಣೆಯ ಅಡಿಯಲ್ಲಿ ಇಡುವುದಕ್ಕೆ ಒಪ್ಪಿರುವರೆಂದು ನ್ಯಾಯವಾದಿಗಳು ವಾದದಲ್ಲಿ ಮಂಡಿಸಿರುವರು ಹಾಗೂ ಈ ನ್ಯಾಯಾಲಯವು ವಿಧಿಸಬಹುದಾದ ಷರತ್ತುಗಳನ್ನು ಪಾಲಿಸಲು ಸಿದ್ಧವಿರುವುದಾಗಿ ಮತ್ತು ಜಾಮೀನು ನೀಡುವುದಕ್ಕೆ ಸಿದ್ಧವಿರುವುದಾಗಿಯೂ ತಮ್ಮ ವಾದದಲ್ಲಿ ನಿವೇದಿಸಿರುವರು. ಈ ಮೇಲಿನ ಎಲ್ಲಾ ಕಾರಣಗಳಿಂದ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿರುವರು.

5. ಇದಕ್ಕೆ ವಿರುದ್ಧವಾಗಿ, ಪ್ರತ್ಯರ್ಜಿದಾರ ಸರ್ಕಾರದ ಪರವಾಗಿ ಉಚ್ಚ ನ್ಯಾಯಾಲಯದ ಸರ್ಕಾರಿ ವಾದಿಗಳಾದ ಶ್ರೀ ಮಕ್ಬೂಬೂಲ್ ಅಹಮದ್ ಅವರು ಹಾಜರಾಗಿ ನ್ಯಾಯಾಲಯ ಈ ಅರ್ಜಿಯನ್ನು ಪರಿಗಣಿಸುವ ಸಮಯದಲ್ಲಿ ನ್ಯಾಯಯುತವಾಗಿ ನೆರವಾಗುವ ಎಲ್ಲಾ ವಸ್ತುವಿಷಯಗಳು ಸಂಗ್ರಹಿಸಿಕೊಳ್ಳುವುದು ಮತ್ತು ಅಧಿನಿಯಮದ 12ನೇ ಪ್ರಕರಣದ ಉಪಬಂಧಗಳ ಪ್ರಕಾರದಂತೆ ನಿವೇದಿಸಿದಂತೆಯೇ ಬಾಲಾಪರಾಧಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು. ಆದರೆ, ಬಾಲಾಪರಾಧಿಯು ಅವನಿಗೆ ತಿಳಿದ ಯಾವುದೇ ಅಪರಾಧದಲ್ಲಿ ಭಾಗಿಯಾಗಿರುವುದು ಅಥವಾ ನೈತಿಕವಾಗಿ, ದೈಹಿಕವಾಗಿ ಅಥವಾ ಮಾನಸಿಕವಾಗಿ

ಅಪಾಯಕ್ಕೆ ಗುರಿಯಾಗಿರುವ ಅಥವಾ ಅವನ ಬಿಡುಗಡೆ ನ್ಯಾಯೋದ್ದೇಶವನ್ನು ವಿಫಲಗೊಳಿಸುವಂತಹ ರೀತಿಯಲ್ಲಿ ಕಂಡುಬರುವಂತಹ ಯುಕ್ತ ಕಾರಣಗಳನ್ನು ಹಾಜರುಪಡಿಸಿದ್ದರೆ, ಆ ಬಾಲಾಪರಾಧಿಯನ್ನು ಬಿಡುಗಡೆ ಮಾಡತಕ್ಕದ್ದಲ್ಲ. ನ್ಯಾಯವಾದಿಗಳು ವಾದವನ್ನು ಮುಂದುವರೆಸುತ್ತಾ ಈ ಪ್ರಕರಣದಲ್ಲಿ ಸಂತ್ರಸ್ತೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವಳು. ಈಗಿರುವಾಗ ಬಾಲಾಪರಾಧಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ನ್ಯಾಯೋದ್ದೇಶವನ್ನು ವಿಫಲಗೊಳಿಸಿದಂತೆ ಆಗುತ್ತದೆ. ಆದುದರಿಂದಲೇ ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನು ಜಾಮೀನಿನ ಮೇಲೆ ಬಿಡುಗಡೆಯ ಹಕ್ಕನ್ನು ಹೊಂದಿರತಕ್ಕದ್ದಲ್ಲ. ಈ ಎಲ್ಲಾ ಕಾರಣಗಳ ಮೇಲೆ ಅರ್ಜಿಯನ್ನು ವಜಾಗೊಳಿಸುವುದಕ್ಕಾಗಿ ಪ್ರಾರ್ಥಿಸಿರುವರು.

6. ನಾನು ಅರ್ಜಿಯ ಜೊತೆಯಲ್ಲಿ ಹಾಜರುಪಡಿಸಿದ ವಸ್ತು ವಿಷಯವನ್ನು ತುಂಬಾ ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ. ಈ ಮೊಕದ್ದಮೆಯ ವ್ಯಾಪಕ ಉದ್ದೇಶಕ್ಕಾಗಿ ಮತ್ತು ಯುಕ್ತ ವಿವೇಚನೆಗಾಗಿ ನಾನು ಅಧಿನಿಯಮದ 12ನೇ ಪ್ರಕರಣವನ್ನು ಉಲ್ಲೇಖಿಸುತ್ತೇನೆ, ಅದು ಈ ಕೆಳಗಿನಂತಿದೆ:–

> "12. ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದವನೆಂದು ಆಪಾದಿತನಾದ ಬಾಲಕನೆಂದು ಕಂಡು ಬರುವ ವ್ಯಕ್ತಿಗೆ ಜಾಮೀನು,–
>
> (1) ಯಾರೇ ವ್ಯಕ್ತಿ, ಬಾಲಕನೆಂದು ಕಂಡುಬರುವಾಗ, ಜಾಮೀನೀಯ ಅಥವಾ ಜಾಮೀನೀಯವಲ್ಲದ ಅಪರಾಧದ ಕೃತ್ಯವನ್ನು ಮಾಡಿರುವಾಗ, ಪೊಲೀಸರು ಬಾಲಕನನ್ನು ದಸ್ತಗಿರಿ ಮಾಡಿ ಅಥವಾ ಬಂಧಿಸಿ ಮಂಡಳಿಯ ಮುಂದೆ ಹಾಜರುಪಡಿಸಿರುವಾಗ ಅಥವಾ ತಂದಿರುವಾಗ, ಅಂಥ ವ್ಯಕ್ತಿಯನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ ಜಾಮೀನು ಭದ್ರತಾ ಪತ್ರದೊಂದಿಗೆ ಅಥವಾ ಹೊರತಾಗಿ ಅಥವಾ ಪರಿವೀಕ್ಷಣಾಧಿಕಾರಿಯ ಮೇಲುಸ್ತುವಾರಿಯ ಅಡಿಯಲ್ಲಿ ಅಥವಾ ಯಾರೇ ಅರ್ಹ ವ್ಯಕ್ತಿಯ

ಪೋಷಣೆಯ ಅಡಿಯಲ್ಲಿ ಬಾಲಕನನ್ನು ಇಡುವುದಕ್ಕೆ ಅವನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು;

ಪರಂತು ಸದರಿ ವ್ಯಕ್ತಿ ತಿಳಿದ ಅಪರಾಧದಲ್ಲಿ ಭಾಗಿಯಾಗಿರುವ ಅಥವಾ ವ್ಯಕ್ತಿ ನೈತಿಕವಾಗಿ, ದೈಹಿಕವಾಗಿ ಅಥವಾ ಮಾನಸಿಕವಾಗಿ ಅಪಾಯಕ್ಕೆ ಗುರಿಯಾಗಿರುವ ಅಥವಾ ವ್ಯಕ್ತಿಯ ಬಿಡುಗಡೆಯಿಂದ ನ್ಯಾಯೋದ್ದೇಶವು ವಿಫಲಗೊಳ್ಳುವಂತಹ ಸನ್ನಿವೇಶಗಳು ಯುಕ್ತ ಕಾರಣಗಳೊಂದಿಗೆ ಕಂಡು ಬಂದರೆ ಅಥವಾ ನಂಬಲು ಅರ್ಹವಾಗಿದ್ದರೆ ಯಾರೇ ಅಂಥ ವ್ಯಕ್ತಿಯೂ ಜಾಮೀನಿನ ಮೇಲೆ ಬಿಡುಗಡೆಗೊಳ್ಳತಕ್ಕದ್ದಲ್ಲ ಮತ್ತು ಮಂಡಳಿ ಜಾಮೀನು ನಿರಾಕರಣೆ ಇರುವ ಕಾರಣಗಳನ್ನು ಅಭಿಲೇಖಿಸತಕ್ಕದ್ದು ಮತ್ತು ಅಂಥ ನಿರ್ಣಯಕ್ಕೆ ಸಂಗತಿಗಳನ್ನು ಮಂಡಿಸತಕ್ಕದ್ದು.

(2) ಮೇಲೆ ಕಂಡು ಬಂದ ಕಾರಣಗಳ ಮೇಲೆ ಅಂಥ ವ್ಯಕ್ತಿಯನ್ನು (1)ನೇ ಉಪಪ್ರಕರಣದ ಅಡಿಯಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗದಿರುವಾಗ, ಪೊಲೀಸ್ ಠಾಣೆಯ ಆಡಳಿತ ಹೊಂದಿರುವ ಅಧಿಕಾರಿ, ಅಂಥ ಅಧಿಕಾರಿಯು ಜಾಮೀನಿನ ಮೇಲೆ ಬಿಡುಗಡೆಯಾಗದಿರುವ ಬಾಲಕನನ್ನು / ವ್ಯಕ್ತಿಯನ್ನು ಮಂಡಳಿಯ ಮುಂದೆ ಅವನನ್ನು ಹಾಜರುಪಡಿಸುವವರೆಗೂ ನಿಯಮಿಸಲಾದಂಥ ರೀತಿಯಲ್ಲಿ ಪರಿವೀಕ್ಷಣಾಲಯದಲ್ಲಿ ಮಾತ್ರವೇ ಬಾಲಕನನ್ನು ಇಡತಕ್ಕದ್ದು.

(3) ಮಂಡಳಿಯು (1)ನೇಯ ಉಪಪ್ರಕರಣ ಅಡಿಯಲ್ಲಿ ಅಂಥ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡದಿರುವಾಗ, ಮಂಡಳಿಯು ಆದೇಶದಲ್ಲಿ ನಿರ್ದಿಷ್ಟಪಡಿಸಿಬಹುದಾದಂತೆ ವ್ಯಕ್ತಿಯ ಸಂಬಂಧದಲ್ಲಿ ವಿಚಾರಣೆ ಇತ್ಯರ್ಥಗೊಳ್ಳುವ ಅವಧಿಯವರೆಗೂ

ಅಂಥ ವ್ಯಕ್ತಿಯನ್ನು ಸಂದರ್ಭನುಸಾರ, ಪರಿವೀಕ್ಷಣಾಲಯಕ್ಕೆ ಅಥವಾ ಸುರಕ್ಷಿತ ಸ್ಥಳಕ್ಕೆ ಕಳುಹಿಸುವುದಕ್ಕೆ ಆದೇಶಿಸತಕ್ಕದ್ದು.

(4) ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನು ಜಾಮೀನು ಆದೇಶದಲ್ಲಿನ ಷರತ್ತುಗಳನ್ನು ಜಾಮೀನು ಆದೇಶದ ಏಳು ದಿನದೊಳಗಾಗಿ ನೆರವೇರಿಸಲು ಸಾಧ್ಯವಾಗದಿರುವಾಗ, ಅಂಥ ಬಾಲಕನನ್ನು ಜಾಮೀನಿನ ಷರತ್ತುಗಳನ್ನು ಮಾರ್ಪಾಡಿಸುವುದಕ್ಕಾಗಿ ಮಂಡಳಿಯ ಮುಂದೆ ಹಾಜರುಪಡಿಸತಕ್ಕದ್ದು."

7. ಮೇಲೆ ಹೇಳಲಾದ ಪ್ರಕರಣದ ಮುಖಾಂತರ ತಿಳಿಯುವುದು ಏನೆಂದರೆ, ಪ್ರಕರಣವು ಜಾಮೀನೀಯ ಅಥವಾ ಜಾಮೀನೀಯವಲ್ಲದ ಅಪರಾಧದ ಕೃತ್ಯವನ್ನು ಎಸಗಿರುವಾಗ ಮತ್ತು ಬಾಲಕನನ್ನು ಪೋಲೀಸರು ದಸ್ತಗಿರಿ ಮಾಡಿರುವಾಗ ಅಥವಾ ಬಂಧಿಸಿರುವಾಗ ಅಥವಾ ಮಂಡಳಿಯ ಮುಂದೆ ಹಾಜರುಪಡಿಸಿರುವಾಗ, ಅಂಥ ವ್ಯಕ್ತಿ, ದಂಡ ಪ್ರಕ್ರಿಯಾ ಸಂಹಿತೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಅಂಥ ವ್ಯಕ್ತಿ ಜಾಮೀನುದಾರರೊಂದಿಗೆ ಅಥವಾ ಜಾಮೀನುದಾರರು ಇಲ್ಲದೆ ಅಥವಾ ಪರಿವೀಕ್ಷಣಾಧಿಕಾರಿಯ ಮೇಲ್ವಿಚಾರಣೆಯ ಅಡಿಯಲ್ಲಿ ಅಥವಾ ಯಾವುದೇ ಅರ್ಹ ವ್ಯಕ್ತಿಯ ಅಡಿಯಲ್ಲಿ ಬಾಲಕನನ್ನು ಇಡಲು ಅವನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು. ಸದರಿ ಪ್ರಕರಣದಿಂದ, ಬಾಲಕನು ತಿಳಿದ ಅಪರಾಧದಲ್ಲಿ ಭಾಗಿಯಾಗಿರುವಾಗ ಅಥವಾ ನೈತಿಕವಾಗಿ, ದೈಹಿಕವಾಗಿ ಅಥವಾ ಮಾನಸಿಕವಾಗಿ ಅಪಾಯಕ್ಕೆ ಗುರಿಯಾಗಿರುವಾಗ ಅಥವಾ ಅವನ ಬಿಡುಗಡೆ ನ್ಯಾಯೋದ್ದೇಶವನ್ನು ವಿಫಲಗೊಳಿಸುವ ರೀತಿಯಲ್ಲಿ ಕಂಡುಬಂದರೆ ಅಂತಹ ಯುಕ್ತ ಕಾರಣಗಳನ್ನು ಹಾಜರುಪಡಿಸಿದ್ದರೆ ಆ ಒಂದು ಕಾರಣಕ್ಕಾಗಿಯೇ ಅಂಥ ಆ ಯಾವುದೇ ಜಾಮೀನು ಅರ್ಜಿಯನ್ನು ನಿರಾಕರಿಸಬಹುದು ಎಂಬ ಅಂಶವು ಸ್ಪಷ್ಟವಾಗುತ್ತದೆ.

8. ಈ ಮೊಕದ್ದಮೆಯ ಇಡೀ ವಸ್ತು ವಿಷಯ ಮತ್ತು ಕಾನೂನಿನ ಮುಖಾಂತರ ಹೇಳುವುದಾದರೆ, ಮೇಲೆ ನಮೂದಿಸಿದ ಆ ಯಾವುದೇ ಒಂದು ಕಾರಣವು

ಇದ್ದರೆ ಸಹ ಬಾಲಾಪರಾಧಿಗೆ ಜಾಮೀನು ನಿರಾಕರಿಸುತ್ತದೆ. ಸಂಬಂಧಪಟ್ಟಂತೆ, ಸಾಧ್ಯವಾದಷ್ಟು ಗಂಭೀರ ಕಾರಣಗಳು ಇದ್ದು, ಅದು ಈ ಅಧಿನಿಯಮದ ಮೇಲಿನ ಉಪಬಂಧಗಳ ಅಡಿಯಲ್ಲಿ ಬರದಿರುವಾಗ, ಬಾಲಕನ ಜಾಮೀನು ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಅಡಿಯಲ್ಲಿ ಪರಿಗಣಿಸಬೇಕಾಗುತ್ತದೆ. ಆದುದರಿಂದ ಮೇಲಿನ ಸದರಿ ಅಧಿನಿಯಮ ಅಧಿನಿಯಮಿಸುವುದು ಅವಶ್ಯವಿರುವುದಿಲ್ಲ. ಅಧಿನಿಯಮದ 12ನೇ ಪ್ರಕರಣ ದಂಡ ಪ್ರಕ್ರಿಯಾ ಸಂಹಿತೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ ಆಪಾದಿತ ಬಾಲಾಪರಾಧಿಯನ್ನು ಬಿಡುಗಡೆ ಮಾಡತಕ್ಕದ್ದು ಎಂದು ನಿರೂಪಿಸಿದೆ. ಆದರೂ ಸಂಸತ್ತು ಇಡೀ ವಸ್ತು ವಿಷಯವನ್ನು ಪುನರ್ ಪರಿಶೀಲನೆ ಮಾಡಿದೆ ಮತ್ತು ಹಳೆಯ ಅಧಿನಿಯಮವನ್ನು ನಿರಸಿತಗೊಳಿಸಿದೆ. ತರುವಾಯದಲ್ಲಿ ಹೊಸ ಅಧಿನಿಯಮವನ್ನು 2015ರಲ್ಲಿ ಅಧಿನಿಯಮಿಸಿದೆ.

9. ಮೇಲಿನ ಕಾನೂನಿನ ಉದ್ದೇಶವನ್ನು ಮತ್ತು ವಿವಿಧ ನ್ಯಾಯಾಲಯಗಳು ನೀಡಿದ ಮತ್ತು ಬಾಲಕ ನ್ಯಾಯ ಮಂಡಳಿ ಆದೇಶಗಳ ಅನುಪಾಲನೆಗಳನ್ನು ಗಮನದಲ್ಲಿಟ್ಟುಕೊಂಡು ಬಾಲಕನ ಬದುಕು ಅಪಾಯವಾಗುವ ಸಾಧ್ಯತೆ ಇರುವುದರಿಂದ ಮತ್ತು ಮತ್ತಷ್ಟು ಅನಿರೀಕ್ಷಿತ ಘಟನೆಗಳು ನಡೆಯಬಾರದು ಎಂಬ ಉದ್ದೇಶದಿಂದ ಆತನ ಜಾಮೀನು ಅರ್ಜಿಯನ್ನು ವ್ಯಾಪಕಗೊಳಿಸಿದೆ ಹಾಗೂ ಈ ಕಾರಣದ ಮೇಲೆ ಅವನ ಜಾಮೀನನ್ನು ನಿರಾಕರಿಸಲಾಗಿದೆ. ಆದರೆ, ಅಧಿನಿಯಮದ 12ನೇ ಪ್ರಕರಣದ ಅಡಿಯಲ್ಲಿ ಸಂಭಾವ್ಯ ನಿರಾಕರಣೆಯ ಉದ್ದೇಶಕ್ಕೆ ಸಂಬಂಧಿಸಿದ ಕಾರಣ ಮಾತ್ರದಿಂದಲೇ ಆ ಯಾವುದೇ ಜಾಮೀನು ಅರ್ಜಿಯನ್ನು ಪರಿಗಣಿಸಬೇಕಾಗಿರುತ್ತದೆ. ಕೆಳ ನ್ಯಾಯಾಲಯವು ಈ ಸಂಬಂಧದಲ್ಲಿ ನೀಡಿದ ಕಾರಣಗಳನ್ನು ಅಧಿನಿಯಮದ 12ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ನ್ಯಾಯ ಸಮ್ಮತವಾಗಿರುವುದಿಲ್ಲ ಮತ್ತು ಉಚಿತವಾಗಿರುವುದಿಲ್ಲ ಮತ್ತು ಸಂಭಾವ್ಯತೆಯಾಗಿರುವುದಿಲ್ಲ ಎಂಬುದು ಇಲ್ಲಿ ಕಂಡು ಬರುತ್ತದೆ. ಪ್ರಕರಣದಲ್ಲಿ ನಮೂದಿಸಿದ ಇತರ ಸನ್ನಿವೇಶಗಳು ಸಹ ಇಲ್ಲಿ ಪ್ರಸ್ತುತವಲ್ಲ, ಈ ಬಗ್ಗೆ ಯಾವುದೇ ವಸ್ತುವಿಷಯುವನ್ನು ಹಾಜರುಪಡಿಸಿರುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ಮಂಡಳಿ ಮತ್ತು ನ್ಯಾಯಾಲಯವು

ಹೊರಡಿಸಿದ ಆ ಯಾವುದೇ ಆದೇಶಗಳು ಕಾನೂನಿನಲ್ಲಿ ಸಮರ್ಥನೀಯವಲ್ಲ ಎಂದು ನಾನು ಭಾವಿಸಿದ್ದೇನೆ. ಕೆಳ ನ್ಯಾಯಾಲಯದ ಆದೇಶದಲ್ಲಿ ಜಾಮೀನನ್ನು ನಿರಾಕರಿಸುವುದಕ್ಕಾಗಿ ಇರುವ ಯಾವುದೇ ಒಂದು ಸಮರ್ಥ ಕಾರಣವನ್ನು ಉಲ್ಲೇಖಿಸಿರುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ಜಾಮೀನಿನ ನಿರಾಕರಣೆಯು ಅಸಮರ್ಥನೀಯ ಮಾತ್ರವಾಗಿರುವುದಿಲ್ಲ. ಇದು ಕಾನೂನು ಬಾಹಿರವಾಗುತ್ತದೆ ಮತ್ತು ಅದು ಅಧಿನಿಯಮದ ಉದ್ದೇಶ ಮತ್ತು ಆಶಯಕ್ಕೆ ವಿರುದ್ಧವಾಗಿರುತ್ತದೆ.

10. ಈ ಮೊಕದ್ದಮೆಯ ಸಂಬಂಧದಲ್ಲಿ ಮೇಲಿನ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ನಾನು ಮೇಲೆ ಮಾಡಿದ ಚರ್ಚೆಯ ನಿರ್ಣಯಗಳ ಮೂಲಕ, ನಾನು, ಸದರಿ ಉಪಬಂಧಗಳ ಅಡಿಯಲ್ಲಿ ಸಂಭಾವ್ಯ ಜಾಮೀನಿನ ಮೇಲೆ ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನು ಬಿಡುಗಡೆಗೊಳ್ಳಲು, ಬಾಲಕ ತಂದೆ ಬಾಲಕನ ಪೋಷಣೆ ಮತ್ತು ಅಭಿರಕ್ಷಣೆಯನ್ನು ತೆಗೆದುಕೊಳ್ಳುವ ಬಗ್ಗೆ ಯುಕ್ತವಾದ ಶಪಥ ಪತ್ರವನ್ನು ದಾಖಲಿಸಿರುವರು ಹಾಗೂ ಅವರಿಂದ ಸಾಕಷ್ಟು ಜಾಮೀನು ಭದ್ರತೆಯನ್ನು ತೆಗೆದುಕೊಳ್ಳುವ ಮೂಲಕ ಮತ್ತು ಬಾಲಕನು ಮುಂದೆ ಅಂಥ ಯಾವುದೇ ಅಪರಾಧ ಚಟುವಟಿಕೆಗಳಲ್ಲಿ ಒಳಗೊಳ್ಳದಿರುವ ಮತ್ತು ಸಮಾಜಕ್ಕೆ ಅಪಾಯವಾಗುವಂತಹ ಇತರ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ಯಾವುದೇ ಕಾರಣಕ್ಕೆ ಭಾಗಿಯಾಗದಿರುವಂತೆ ನೋಡಿಕೊಳ್ಳುವುದಾಗಿ ಅವನ ತಂದೆ ಸಲ್ಲಿಸಿದ ಅಫಿದಾವಿತ್ತನ್ನು ಪರಿಗಣಿಸಬೇಕಾಗುತ್ತದೆ ಎಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ.

ಮೇಲೆ ನಮೂದಿಸಿದ ಕಾರಣಗಳಿಗಾಗಿ ಪುನರ್ ಪರಿಷ್ಕರಣಾ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಕಲಬುರ್ಗಿಯ ಬಾಲಕ ನ್ಯಾಯ ಮಂಡಳಿಯು ಅಪರಾಧ ಸಂ.146/ 2016ರಲ್ಲಿ ದಿನಾಂಕ 05.01.2017 ರಂದು ಹೊರಡಿಸಿದ ಆದೇಶವನ್ನು ಮತ್ತು ಕಲುಬುರ್ಗಿಯ IIನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು ಅಪರಾಧ ಅಪೀಲು

ಸಂ.2/2017 ರಲ್ಲಿ ದಿನಾಂಕ 17.01.2017 ರಂದು ಹೊರಡಿಸಿದ ಆದೇಶವನ್ನು ವಜಾ ಮಾಡಲಾಗಿದೆ. ಕಾನೂನಿನ ಸಂಘರ್ಷಕ್ಕೊಳಗಾದ (ಅರ್ಜಿದಾರ) ಬಾಲಕನನ್ನು ಈ ಮುಂದಿನ ಷರತ್ತುಗಳಿಗೊಳಪಟ್ಟು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು.

1. ಪರಿಷ್ಕರಣಾ ಅರ್ಜಿದಾರರನ್ನು ಅಧಿಕಾರ ವ್ಯಾಪ್ತಿಯ ನ್ಯಾಯಾಲಯ ಬಾಲಕ ನ್ಯಾಯ ಮಂಡಳಿಗೆ ತೃಪ್ತಿಕರವೆನಿಸುವಂತಹ ಮೊತ್ತಕ್ಕೆ ಇಬ್ಬರು ಧನಾನುಕೂಲತೆ ಹೊಂದಿರುವ ಇಬ್ಬರು ವ್ಯಕ್ತಿಗಳ ಸಹಿಯೊಂದಿಗೆ, ಮೊತ್ತ 1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ) ರೂ.ಗಳ ಭದ್ರತೆಯೊಂದಿಗೆ ಬಾಲಕನ ಪೋಷಕರು/ ತಂದೆ–ತಾಯಿಗಳು ಸಲ್ಲಿಸಿದ ಬಂಧಪತ್ರದ ಮೇಲೆ ಬಾಲಕನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸತಕ್ಕದ್ದು.

2. ಬಾಲಕನು ಪ್ರಾಸಿಕ್ಯೂಷನ್ ಸಾಕ್ಷಿದಾರರನ್ನು ಭಯಪಡಿಸುವ ಅಥವಾ ಅವರ ವಿಚಾರಣೆಯನ್ನು ವ್ಯತ್ಯಸ್ಥಗೊಳಿಸುವ ಕಾರ್ಯಕ್ಕೆ ತೊಡಗತಕ್ಕದ್ದಲ್ಲ.

3. ತನಿಖಾಧಿಕಾರಿಗೆ ಅಗತ್ಯವೆನಿಸಿದಾಗ ಮತ್ತು ಅಗತ್ಯಪಡಿಸಿದಾಗಲೆಲ್ಲ ಬಾಲಕನು ಸ್ವತಃ ಲಭ್ಯವಾಗುವಂತೆ ಮಾಡತಕ್ಕದ್ದು.

4. ಬಾಲಕನು ಸಂಬಂಧಪಟ್ಟ ನ್ಯಾಯಾಲಯ / ಮಂಡಳಿ ಮುಂದೆ ಸುನಾವಣೆಯ ಎಲ್ಲ ದಿನಾಂಕದಂದು ವಿಳಂಬವಿಲ್ಲದೆ ಹಾಜರಾಗತಕ್ಕದ್ದು.

5. ಸಂಬಂಧಪಟ್ಟ ನ್ಯಾಯಾಲಯ / ಮಂಡಳಿಯ ಪೂರ್ವಸಮ್ಮತಿಯ ಹೊರತಾಗಿ ಬಾಲಕನು ಅಧಿಕಾರ ವ್ಯಾಪ್ತಿಯ ಪ್ರದೇಶವನ್ನು ಬಿಟ್ಟು ಹೊರ ಹೋಗತಕ್ಕದ್ದಲ್ಲ.

---